XXVII	Uttar Kannada		
1	Ankola	100	20
2	Bhatkal	128	0
3	Haliyal	94	16
4	Honnavar	146	0
5	Karwar	101	20
6	Kumta	129	0
7	Mundgod	75	23
8	Siddapur	91	22
9	Sirsi	153	15
10	Supa	100	22
11	Yellapur	85	18
	Total	1202	156
	Grand Total	40301	2844

1431(1752) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಡಿತರ ವಿತರಣೆ ಮಾಡುತ್ತಿರುವ ನ್ಯಾಯ ಬೆಲೆ ಅಂಗಡಿ ಎಷ್ಟು;

ಆ) ನ್ಯಾಯಬೆಲೆ ಅಂಗಡಿಯಲ್ಲಿ ವಿತರಿಸುತ್ತಿರುವ ವಸ್ತುಗಳು ಯಾವುವು;

ಇ) ಪಡಿತರ ಅಂಗಡಿಯವರಿಗೆ ಸರ್ಕಾರ ನೀಡುತ್ತಿರುವ ಕಮೀಷನ್ ಎಷ್ಟು;

ಈ) ಇದನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹೌದಾದಲ್ಲಿ ಯಾವಾಗ ಜಾರಿಗೆ ತರಲಾಗುವುದು;

ಊ) 2004ನೇ ಸಾಲಿನ ಹಾಗೂ ಈ ವರ್ಷದ ಜನವರಿ ತಿಂಗಳಲ್ಲಿ ಪಡಿತರ ಅಂಗಡಿ ಮೂಲಕ ವಿತರಿಸಿದ ಸಕ್ಕರೆ ಪ್ರಮಾಣ ಎಷ್ಟು? (ಜಿಲ್ಲಾವಾರು ಹಾಗೂ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುವಾರು ನ್ಯಾಯಬೆಲೆ ಅಂಗಡಿಗಳ ವಿವರ ನೀಡುವುದು)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ರಾಜ್ಯದಲ್ಲಿ ಡಿಸೆಂಬರ್ 2004ರ ಅಂತ್ಯಕ್ಕೆ ಒಟ್ಟು 20664 ನ್ಯಾಯಬೆಲೆ ಅಂಗಡಿಗಳಿರುತ್ತವೆ.

ಆ) ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ವಿತರಿಸಲಾಗುತ್ತಿದೆ.

ಇ) ಈ ಕೆಳಕಂಡಂತೆ ನ್ಯಾಯಬೆಲೆ ಅಂಗಡಿಯವರಿಗೆ ಕಮೀಷನ್ ನೀಡಲಾಗುತ್ತಿದೆ.

(ಕಮೀಷನ್ ರೂ.ಗಳಲ್ಲಿ ಪ್ರತಿ ಕ್ವಿಂಟಾಲ್‌ಗೆ)

ಪಡಿತರ ಧಾನ್ಯ	ಎ.ಎ.ವೈ	ಬಿ.ಪಿ.ಎಲ್
ಅಕ್ಕಿ	20.65	26.00
ಗೋಧಿ	15.00	19.00
ಸಕ್ಕರೆ	7.43	7.43
ಸೀಮೆಎಣ್ಣೆ	300	300
	ಪ್ರತಿ KL ಗೆ	ಪ್ರತಿ KLಗೆ

ಈ) ಹೌದು.

ಉ) ಶೀಘ್ರವೇ ತೀರ್ಮಾನ ಕೈಗೊಳ್ಳಲಾಗುವುದು.

ಊ) 2004ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಒಟ್ಟು 578 ನ್ಯಾಯಬೆಲೆ ಅಂಗಡಿಗಳ ಪೈಕಿ ಈ ಕೆಳಕಂಡಂತೆ ನಮೂದಿಸಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆಯನ್ನು ಎತ್ತುವಳಿ ಮಾಡಿ ವಿತರಣೆ ಮಾಡಿರುವ ವಿವರಗಳನ್ನು ಕೆಳಕಂಡಂತಿದೆ:

ತಾಲ್ಲೂಕು	ಸಕ್ಕರೆ ಎತ್ತುವಳಿ ಮಾಡಿದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಮಾತ್ರ	ಎತ್ತುವಳಿ ಮಾಡಿದ ಮಾಡಿದ ಪ್ರಮಾಣ	ಪಡಿತರ ಚೀಟಿದಾರರಿಗೆ ನ್ಯಾಯಬೆಲೆ ಅಂಗಡಿಯಿಂದ ವಿತರಣೆಯಾದ ಪ್ರಮಾಣ
ಶಿವಮೊಗ್ಗ ಪಡಿತರ	31	100	100
ಶಿವಮೊಗ್ಗ ಗ್ರಾ	29	100	100
ಭದ್ರಾವತಿ ಪಡಿತರ	45	100	100
ಭದ್ರಾವತಿ ಗ್ರಾ	49	200	200
ಸಾಗರ	18	75	75
ಶಿಕಾರಿಪುರ	27	100	100
ತೀರ್ಥಹಳ್ಳಿ	27	75	75
ಹೊಸನಗರ	17	75	75
ಸೊರಬ	11	75	75
ಒಟ್ಟು	254	900	900

2005ರ ಜನವರಿ ಮಾಹೆಗೆ, ಶಿವಮೊಗ್ಗ ಜಿಲ್ಲೆಗೆ 2735 ಕ್ವಿಂಟಾಲ್ ಲೆವಿ ಸಕ್ಕರೆ ಬಿಡುಗಡೆ ಮಾಡಿದ್ದು 28–1–2005ಕ್ಕೆ 920 ಕ್ವಿಂಟಾಲ್ ಸಕ್ಕರೆಯನ್ನು ಎತ್ತುವಳಿಯಾಗಿದ್ದು ಎತ್ತುವಳಿ ಮತ್ತು ವಿತರಣೆ ಪ್ರಗತಿಯಲಿರುತ್ತದೆ. ಜಿಲ್ಲೆಯಲ್ಲಿರುವ ಎಲ್ಲಾ 578 ನ್ಯಾಯಬೆಲೆ ಅಂಗಡಿಗಳಿಗೆ ಸಕ್ಕರೆ ಮರುಹಂಚಿಕೆ ನೀಡಲಾಗಿದೆ.